ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/05/ಇಸಿಎಸ್(1)/2022

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
Email:dte.commissioner@gmail.com
ದಿನಾಂಕ: 17.09.2022

## ಸುತ್ತೋಲೆ

ವಿಷಯ: ಡಿಸಿಇಟಿ-2022 ರ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಗಮನಿಸಬೇಕಾದ ಅಂಶಗಳ ಕುರಿತು.

ಉಲ್ಲೇಖ: ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಇವರ ಪತ್ರ ಸಂಖ್ಯೆ:ಇಡಿ/ಕೆಇಎ/ಡಿಸಿಇಟಿ-ಲ್ಯಾಟರಲ್ ಎಂಟ್ರಿ-2022 ದಿನಾಂಕ:17.09.2022

*********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಯಾವುದೇ ಇಂಜಿನಿಯರಿಂಗ್ ವಿಭಾಗದಲ್ಲಿ ಡಿಪ್ಲೋಮ ಪದವಿ ಪಡೆದಿರುವ ಅಭ್ಯರ್ಥಿಗಳು ಬೇರೆ ಯಾವುದೇ ಇಂಜಿನಿಯರಿಂಗ್ ಪದವಿ ಪ್ರವೇಶಕ್ಕೆ ಅರ್ಹರಾಗಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲ್ಪಡುವ ಡಿಸಿಇಟಿ-2022ರ ಪರೀಕ್ಷೆಯಲ್ಲಿ ಈ ಕೆಳಕಂಡ ಮಾನದಂಡಗಳನ್ವಯ (ಡಿಸಿಇಟಿ-2022ರ ಪರೀಕ್ಷೆಗೆ ಮಾತ್ರ ಪರಿಗಣಿಸಿ) ವಿದ್ಯಾರ್ಥಿಗಳ ರ್‍ಯಾಂಕ್ ನಿಗದಿಪಡಿಸಲಾಗುವುದು.

1. ಡಿಸಿಇಟಿ-2022 ರ ಪರೀಕ್ಷೆಯಲ್ಲಿ ಡಿಪ್ಲೋಮ ವ್ಯಾಸಂಗದಲ್ಲಿ ಅಭ್ಯಾಸ ಮಾಡಿರುವ Applied Science and Applied Mathematics ವಿಷಯಗಳನ್ನು ಮಾತ್ರ ಪರಿಗಣಿಸಿ ಎಲ್ಲಾ ಪ್ರೋಗ್ರಾಂಗಳಿಗೆ ಅನ್ವಯಿಸುವಂತೆ ಒಂದು ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ, ಡಿಸಿಇಟಿ-2022 ರ ಪರೀಕ್ಷೆಯನ್ನು 100 ಅಂಕಗಳಿಗೆ 3 ಗಂಟೆಯ ಅವಧಿಯ ಪರೀಕ್ಷೆಯನ್ನು ನಡೆಸುವುದು.
2. ಅಂತಿಮ ವರ್ಷದ (05 ಮತ್ತು 06ನೇ ಸೆಮಿಸ್ಟರ್) ಪರೀಕ್ಷೆಯ ತೇರ್ಗಡೆಯಾದ ಫಲಿತಾಂಶವನ್ನು ಪರಿಗಣನೆಗೆ ತೆಗೆದುಕೊಳ್ಳುವುದು.
3. ಡಿಸಿಇಟಿ-2022 ರ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು 100 ಅಂಕಗಳಿಗೆ ಗಳಿಸಿದ ಅಂಕಗಳ ಶೇ.50 ಅನ್ನು ಪರಿಗಣಿಸುವುದು ಹಾಗೂ ಅದೇ ರೀತಿಯಲ್ಲಿ ಅಂತಿಮ ವರ್ಷದ ಡಿಪ್ಲೋಮದಲ್ಲಿ ತೇರ್ಗಡೆಯಾದ ಪಡೆದ ಒಟ್ಟಾರೆ ಅಂಕಗಳ ಶೇ.50 ಅನ್ನು ಪರಿಗಣನೆಗೆ ತೆಗೆದುಕೊಂಡು ಇವೆರಡನ್ನೂ ಸೇರಿಸಿ ವಿದ್ಯಾರ್ಥಿಗಳ ರ್‍ಯಾಂಕ್ ಅನ್ನು ನಿಗದಿಪಡಿಸುವುದು.

ಮೇಲ್ಕಂಡ ಮಾನದಂಡಗಳ ಅನ್ವಯ ಪರೀಕ್ಷಾ ತಯಾರಿಯನ್ನು ನಡೆಸಲು ಡಿಸಿಇಟಿ-2022 ರ ಪರೀಕ್ಷೆಗೆ ಹಾಜಾರಾಗ ಬಯಸುವ ಎಲ್ಲಾ ವಿದ್ಯಾರ್ಥಿಗಳ ಮತ್ತು ಪೋಷಕರ ಗಮನಕ್ಕೆ ತಪ್ಪದೇ ತರಲು ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ-ಸೂಚನ ಫಲಕದಲ್ಲಿ ಪ್ರಕಟಿಸಲು ಮತ್ತು ಪರೀಕ್ಷಾ ಕೊಠಡಿಗಳಲ್ಲಿ ಸುತ್ತೋಲಿಸಿ ಪ್ರಚುರಪಡಿಸಲು.

ಪ್ರತಿ: 1. ಇ-ಗವರ್ನೆನ್ಸ್ - ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ - ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಮಾನ್ಯ ಆಯುಕ್ತರವರ ಆಪ್ತಶಾಖೆ
4. ನಿರ್ದೇಶಕರವರ ಆಪ್ತ ಶಾಖೆ
5. ಕಾಯದರ್ಶಿಯವರ ಆಪ್ತಶಾಖೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ:ಇಡಿ/ಕೆಇಎ/ಡಿಸಿಇಟಿ-ಲ್ಯಾಟರಲ್ಎಂಟ್ರಿ-2022(ಭಾ-1) ದಿನಾಂಕ:16.09.2022

# ಸುತ್ತೋಲೆ

## ಡಿಸಿಇಟಿ-2022 ರ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಗಮನಕ್ಕೆ

ಸರ್ಕಾರದ ಪತ್ರ ಸಂಖ್ಯೆ: ಇಡಿ 155 ಟಿಇಸಿ 2022, ದಿನಾಂಕ:19.07.2022 ರಲ್ಲಿ ಯಾವುದೇ ಇಂಜಿನಿಯರಿಂಗ್ ವಿಭಾಗದಲ್ಲಿ ಡಿಪ್ಲೋಮೊ ಪದವಿ ಪಡೆದಿರುವ ಅಭ್ಯರ್ಥಿಗಳು ಬೇರೆ ಯಾವುದೇ ಇಂಜಿನಿಯರಿಂಗ್ ಪದವಿ ಪ್ರವೇಶಕ್ಕೆ ಅರ್ಹರಾಗಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಮಾನದಂಡಗಳನ್ನು ಡಿಸಿಇಟಿ-2022 ಪರೀಕ್ಷೆಗೆ ಮಾತ್ರ ಪರಿಗಣಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪ್ರವೇಶ ಪರೀಕ್ಷೆಯನ್ನು ನಡೆಸಿ ವಿದ್ಯಾರ್ಥಿಗಳ ರ್‍ಯಾಂಕ್ ನಿಗಧಿಪಡಿಸುವಂತೆ ಸೂಚಿಸಲಾಗಿದೆ.

1. ಡಿಸಿಇಟಿ -2022 ರ ಪರೀಕ್ಷೆಯಲ್ಲಿ ಡಿಪ್ಲೋಮೊ ವ್ಯಾಸಂಗದಲ್ಲಿ ಅಭ್ಯಾಸ ಮಾಡಿರುವ **Applied Science and Applied Mathematics** ವಿಷಯಗಳನ್ನು ಮಾತ್ರ ಪರಿಗಣಿಸಿ ಎಲ್ಲಾ ಪ್ರೋಗ್ರಾಂಗಳಿಗೆ ಅನ್ವಯಿಸುವಂತೆ ಒಂದು ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ, ಡಿಸಿಇಟಿ -2022 ರ ಪರೀಕ್ಷೆಯನ್ನು 100 ಅಂಕಗಳಿಗೆ 3 ಗಂಟೆಯ ಅವಧಿಯ ಪರೀಕ್ಷೆಯನ್ನು ನಡೆಸುವುದು.
2. ಅಂತಿಮ ವರ್ಷದ (05 ಮತ್ತು 06 ನೇ ಸೆಮಿಸ್ಟರ್) ಪರೀಕ್ಷೆಯ ತೇರ್ಗಡೆಯಾದ ಫಲಿತಾಂಶವನ್ನು ಪರಿಗಣನೆಗೆ ತೆಗೆದುಕೊಳ್ಳುವುದು.
3. ಡಿಸಿಇಟಿ-2022 ರ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು 100 ಅಂಕಗಳಿಗೆ ಗಳಿಸಿದ ಅಂಕಗಳ ಶೇ.50 ಅನ್ನು ಪರಿಗಣಿಸುವುದು ಹಾಗೂ ಅದೇ ರೀತಿಯಲ್ಲಿ ಅಂತಿಮ ವರ್ಷದ ಡಿಪ್ಲೋಮೊದಲ್ಲಿ ತೇರ್ಗಡೆಯಾದ ಪಡೆದ ಒಟ್ಟಾರೆ ಅಂಕಗಳ ಶೇ.50 ಅನ್ನು ಪರಿಗಣನೆಗೆ ತೆಗೆದುಕೊಂಡು, ಇವರೆಡನ್ನೂ ಸೇರಿಸಿ ವಿದ್ಯಾರ್ಥಿಗಳ ರ್‍ಯಾಂಕ್ ನ್ನು ನಿಗಧಿಪಡಿಸುವುದು.

ಸರ್ಕಾರವು ನೀಡಿರುವ ಮೇಲ್ಕಂಡ ಮಾನದಂಡಗಳ ಅನ್ವಯ ಡಿಸಿಇಟಿ-2022ರ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲಾಗುವುದು. ಡಿಸಿಇಟಿ 2022ರ ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳು ಪರೀಕ್ಷೆಗೆ ಮೇಲಿನ ಸೂಚನೆಗಳನುಸಾರ ತಯಾರಿಯನ್ನು ನಡೆಸುವುದು.

ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in